ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ : 122/2024**

**ಫ್ರಾಸಾ-1 ಚಾಸಾ- 1**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ವೆಂಕಟೇಶ ನಾಯಕ್ |
| ತಂದೆಯ ಹೆಸರುಃ | : | ರಾಜಾ ನಾಯಕ್ |
| ವಯಸ್ಸುಃ | : | 37 ವರ್ಷ |
| ಉದ್ಯೋಗಃ | : | ಅಟೋ ಚಾಲಕ |
| ವಾಸ | : | ಗೊಲ್ಲರಹಳ್ಳಿ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:12-03-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಚಾಸಾ-2 ರಿಂದ 4 ರವರ ಹಾಗೂ ಆರೋಪಿತರ ಪರಿಚಯವಿದೆ. ಚಾಸಾ-5 ನನ್ನ ಹೆಂಡತಿ. ಆರೋಪಿ ನನ್ನ ಹೆಂಡತಿ ಚಾಸಾ-5 ರವರಿಗೆ ಫೋನ್ ಮಾಡಿ ಮೆಸೇಜ್ ಮಾಡಿ ಕೆಲಸ ಮಾಡುವ ಜಾಗಕ್ಕೆ ಹೋಗಿ ಅವಾಚ್ಯ ಶಬ್ದಗಳಿಂದ ಬೈಯುವುದು ನೋಡುವುದು ಇತ್ಯಾದಿಯಾಗಿ ಅಸಭ್ಯವಾಗಿ ನಡೆದುಕೊಳ್ಳುತ್ತಿದ್ದನು. ದಿನಾಂಕ 2-3-2023ರಂದು ರಾತ್ರಿ 11 ಗಂಟೆಗೆ ನಾನು ಮನೆಯಲ್ಲಿ ಇಲ್ಲದೆ ಇದ್ದಾಗ ಆರೋಪಿ ಮತ್ತು ಆತನ ತಾಯಿ ರೇಣುಕಾಬಾಯಿ ನಮ್ಮ ಮನೆಗೆ ಬಂದು ನನ್ನ ಹೆಂಡತಿಗೆ ಬಾಯಿಗೆ ಬಂದಂತೆ ಬೈದು ಜಗಳ ಮಾಡಿದ್ದರು. ಅಕ್ಕಪಕ್ಕದ ಮನೆಯವರು ನನಗೆಕರೆ ಮಾಡಿ ತಿಳಿಸಿದರು. ನಾನು 10 ನಿಮಿಷದಲ್ಲಿ ಮನೆಗೆ ಬಂದೆನು. ಆಗ ನಾನು ನನ್ನ ಹೆಂಡತಿಯಲ್ಲಿ ಯಾವ ಕಾರಣಕ್ಕೆ ಗಲಾಟೆ ನಡೆಯಿತೆಂದು ಕೇಳಿದಾಗ ಆರೋಪಿ ಮತ್ತು ಆತನ ತಾಯಿ ಬಂದರು.ಆಗ ನಾನು ಅವರಲ್ಲಿ ಏಕೆ ಗಲಾಟೆ ಮಾಡಿದಿರೆಂದು ಕೇಳಿದಾಗ ಅವರಿಬ್ಬರೂ ನನ್ನ ತಾಯಿಗೆ ಅವಾಚ್ಯ ಶಬ್ದಗಳಿಂದ ಬೈದರು. ಮಾತಿಗೆ ಮಾತುಬೆಳೆದು ರೇಣುಕಾಬಾಯಿ ನನ್ನ ಕಣ್ಣಿಗೆ ಖಾರದ ಪುಡಿ ಎರಚಿದರು. ಆಗ ನಾನು ಪ್ರಜ್ಞೆ ತಪ್ಪಿ ಬಿದ್ದೆನು. ನನಗೆ ಮಚ್ಚಿನಿಂದ ಆರೋಪಿಯು ತಲೆಗೆ ಹಲ್ಲೆ ಮಾಡಿದನು. ಆಗ ನನಗೆ ರಕ್ತಸ್ರಾವವಾಯಿತು. ನಂತರ ಅರಸೀಕೆರೆ ಸರ್ಕಾರಿ ಆಸ್ಪತ್ರೆಗೆ ನನ್ನನ್ನು ಕರೆದುಕೊಂಡು ಹೋದರು.

ನನ್ನನ್ನು ಕೊಲೆ ಮಾಡಬೇಕೆಂದು ಹಲ್ಲೆ ಮಾಡಿರುತ್ತಾನೆ. ಜಾವಗಲ್ ಠಾಣೆಯ ಪೊಲೀಸರು ಆಸ್ಪತ್ರೆಗೆ ಬಂದು ಹೇಳಿಕೆ ಪಡೆದರು. ಅದಕ್ಕೆ ಸಂಬಂಧಿಸಿದಂತೆ ಜಾವಗಲ್ ಪೊಲೀಸ್ ಠಾಣೆಯಲ್ಲಿ ದೂರುದಾಖಲಾಗಿತ್ತು. ಅದರಲ್ಲಿ ಆರೋಪಿತರನ್ನು ಪೊಲೀಸರು ದಸ್ತಗಿರಿ ಮಾಡಿ ಜೈಲಿಗೆ ಕಳುಹಿಸಿದ್ದರು. ಆತನು ಜೈಲಿನಿಂದ ಬಂದ ನಂತರ ಮತ್ತೆ ಬಂದು ಗಲಾಟೆ ಮಾಡಿದನು. ಆಗ ಮತ್ತೆ ನಾವು ಮಹಿಳಾ ಪೊಲೀಸ್ ಠಾಣೆಗೆದೂರು ಕೊಟ್ಟೆವು. ಮತ್ತೆ ಆತ ಜೈಲಿಗೆ ಹೋದನು. ಮತ್ತೆ ಜೈಲಿನಿಂದ ಬಂದು ಏಪ್ರಿಲ್ 2024 ರಲ್ಲಿ ಮತ್ತೆ ಮನೆ ಬಳಿ ಬಂದು ನನಗೆ ಅವಾಚ್ಯ ಶಬ್ದಗಳಿಂದ ಬೈದು ನಿನ್ನ ಹೆಂಡತಿ ಫೋಟೋವನ್ನು ಬ್ಯಾನರಿ ಮಾಡಿಸಿ ಊರಿನ ಹೆಬ್ಬಾಗಿಲಿಗೆ ಹಾಕಿಸುತ್ತೇನೆ ಎಂದು ಹೇಳುತ್ತಿದ್ದನು. ಆಗ ಮತ್ತೆ ದೂರು ಕೊಟ್ಟೆವು, ಮತ್ತೆ ಜೈಲಿಗೆ ಹೋದನು.

2.ಈಗ ತೋರಿಸಿದ ದಾಖಲೆಯಲ್ಲಿ ನನ್ನ ರುಜು ಇದೆ. ಇದನ್ನು ನಿಪಿ-1 ಎಂದು ಸಾಕ್ಷಿಯ ರುಜುವನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೇಳಿದ ಕಾರಣ ಕಾಲ್ವಕಾಶ ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**